ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವರುಣಾ ನಾಲೆಯಿಂದ ತೊಂದರೆಯಾಗಿರುವ ಪ್ರದೇಶ ಮದ್ದೂರಿನ ಕಡೆಯ ಭಾಗ ವಿಶ್ವೇಶ್ವರಯ್ಯ ಕೆನಾಲ್ ಕಡೆಗೆ ಮತ್ತು ಮುಳವಳ್ಳಿ ಕಡೆಗೆ ಇರತಕ್ಕ ಪ್ರದೇಶಗಳಲ್ಲಿ ಪ್ರವಾಸಮಾಡಿ ಅಲ್ಲಿನ ಜನರ ಅಭಿಪ್ರಾಯವನ್ನು ಸಂಗ್ರಹಿಸಿದ್ದಾರೆ. ಅಂದ ಮೇರೆ ಅವರ ಅಭಿಪ್ರಾಯವೇನು? ಅಲ್ಲಿನ ಜನಗಳ ತೊಂದರೆ ಬಗ್ಗೆ ಕಮಿಟಿಯವರು ಏನು ವರದಿಮಾಡಿದ್ದಾರೆ?

ಶ್ರೀ ವೀರೇಂದ್ರ ಪಾಟೀರ್.—ಈ ವರುಣಾ ನಾಲೆಯಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಮಾನ್ಯ ನದಸ್ಯರು ಹೇಳಿದಹಾಗೆ ವಿಶ್ವೇಶ್ವರಯ್ಯ ಕೆನಾಲ್ ಟೆಯಿರ್ ಎಂಡ್‌ನಲ್ಲಿ ಇರುವ ಪ್ರದೇಶ ಗಳಿಗೆ ನಾಕಷ್ಟು ನೀರು ಬಾರದೇ ಇರುವುದಕ್ಕೆ ಅನೇಕ ಕಾರಣಗಳಿವೆ. ಮಾನ್ಯ ನದಸ್ಯರು ನಮ್ಮಲ್ಲಿ ನಾಕಷ್ಟು ನೀರು ಬರುವುದಿಲ್ಲವೆಂದು ಹೇಳಿದರೆ, ಅದಕ್ಕೆ ಪ್ರತ್ಯೇಕವಾದ ಕಾರಣಗಳಿವೆ.

ಅಧ್ಯಕ್ಷರು.—ಪ್ರಶ್ನೆ ನಂ. 63 ಮಾನ್ಯ ನದಸ್ಯರು ಗೈರು ಹಾಜರು ಆಗ ಪ್ರಶ್ನೆ ನಂ. 75.

## Forest Lands in Mysore District

75. Sri M. BASAVARAJU (K. R. Nagar).—

Will the Minister of State for Forests be p'eased to state:—

(*a*) the number of acres that are under Forest in Mysore District from the last 20 years (Talukwise figures may be furnished);

(*b*) whether there has been depletion of Forest areas, and if so, whether it has not been the main reason for the irregular and insufficient rainfall in the district;

(*c*) the measures taken by Government to prevent disforestation in the District;

(*d*) the measures that the Government propose to take to increase the acreage of forests and forest wealth of the State?

Sri ALUR HANUMANTHAPPA (Minister of State for Forests).—

(*a*)

| | *Name of Taluk* | *Forest area in acres.* |
|---|---|---|
| 1 | Mysore | 2,998-38 |
| 2 | T. Narsipur | 454-40 |
| 3 | Heggadadevanakote | 1,77,686-31 |
| 4 | Hunsur | 18,689-83 |
| 5 | Periyapatua | 35,746-82 |
| 6 | K. R. Nagar | 809-00 |
| 7 | Kollegal | 4,65,330-27 |
| 8 | Chamarajanagar | 62,796-80 |
| 9 | Yelandur | 21,760-00 |
| 10 | Nanjangud | 9,132-80 |
| 11 | Gundlupet | 1,34,521-60 |
| | Total | 9,29,835-24 |

(*b*) Only a small area has been released and it would not perceptibly affect the rainfall in the district.

(*c*) This does not arise in view of reply to clause (*b*).

(*d*) Certain areas have been ordered to be released from the Revenue department to the Forest Department for afforestation purposes. Plantations such as Teak, Fast growing species and Forest Consolidation Schemes are taken up to increase the forest wealth.

ಶ್ರೀ ಎಂ. ಬಸವರಾಜು.—ಕಳೆದ 20 ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಅರಣ್ಯವನ್ನು ಬೆಳೆಸಲಾಗಿರುವ ಪ್ರದೇಶದ ವಿಸ್ತೀರ್ಣ 9,29,835 ಎಕರೆ ಎಂದು ಹೇಳಿದ್ದೀರಿ, ನಮಗೆ ಸ್ವಾತಂತ್ರ್ಯ ಬಂದಮೇಲೆ ಲಕ್ಷಾಂತರ ಎಕರೆ ಕಾಡನ್ನು ಕಡಿದು ನಾಶ ಮಾಡಿದ್ದಾರೆ. ಆದ್ದರಿಂದ ಮಳೆ ಸರಿಯಾಗಿ ಆಗುತ್ತಿಲ್ಲ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಆದಕಾರಣ 1947ನೇ ಇಸವಿಯಿಂದ ಈಚೆಗೆ ಎಷ್ಟು ಎಕರೆ ಪ್ರದೇಶದಲ್ಲಿ ಕಾಡನ್ನು ಬೆಳೆಸಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಅಲೂರು ಹನುಮಂತಪ್ಪ.- ಈಗಾಗಲೇ ನಾನು ಹೇಳಿದ್ದೇನೆ, 9,29,835 ಎಕರೆಗಳಲ್ಲಿ ಕಾಡನ್ನು ಬೆಳೆಸಿದೆ ಎಂದು. ಕಾಡನ್ನು ಕಡಿದ ಪ್ರದೇಶದಲ್ಲಿ ಹೊಸದಾಗಿ ಕಾಡನ್ನು ಬೆಳೆಸಿದೆ. ಅದರ ಜೊತೆಗೆ ರೆವಿನ್ಯೂ ಇಲಾಖೆಯಿಂದ 50 ಸಾವಿರ ಎಕರೆ ಜಮೀನನ್ನು ತೆಗೆದುಕೊಂಡು ಅದರಲ್ಲಿ ಅಫಾರೆಸ್ಟೇಷನ್ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 1,34,521 ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಿದೆ ಎಂದು ಹೇಳಿದ್ದೀರಿ, ಇದೇನು ಈ ವರ್ಷ ತಯಾರು ಮಾಡಿದ ಅಂಕಿ ಅಂಶಗಳೋ ಅಥವಾ ಬೇರೆ ಅಂಕಿ ಅಂಶಗಳೋ ಹೇಗೆ ?

ಶ್ರೀ ಅಲೂರು ಹನುಮಂತಪ್ಪ.—ಈಗ ಕೊಟ್ಟಿರತಕ್ಕ ವರದಿ ಸರಿಯಾದ ವರದಿ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅರಣ್ಯ ನಾಶವನ್ನು ಹೆಚ್ಚಿಸುವುದಕ್ಕಾಗಿ ತೇಗದಂತಹ ಬೆಳೆಯನ್ನು ಮತ್ತು ಜಾಗ್ರತೆ ಬೆಳೆಯುವ ಜಾತಿಯ ಗಿಡಗಳನ್ನು ಬೆಳೆಯುವುದನ್ನು ಮತ್ತು ಅರಣ್ಯವನ್ನು ಒಟ್ಟುಗೂಡಿಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಹಾಗೆ ಉದಾಹರಣೆಗೆ ಹೇಳುವುದಾದರೆ ಸಾವಿರಾರು ಎಕರೆ ಪ್ರದೇಶಗಳಲ್ಲಿ ಗಿಡಗಳನ್ನು ಹಾಕಿದ್ದಾರೆ. ಅದಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗಿವೆ. ಮತ್ತು ಆ ಗಿಡಗಳೂ ಹೊರಟುಹೋಗಿವೆ. ಕಾಡನ್ನು ಕಡಿದು ಹಾಕಿರುವುದರಿಂದ ಮಳೆಯೂ ಕಡಿಮೆಯಾಗಿದೆ. ಆದ್ದರಿಂದ ಅರಣ್ಯ ಇರಾಖೆಗೆ ಸೇರಿದ ಖಾಲಿ ಇರುವ ಹಾಗೂ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಬಡವರಿಗೆ ಮಂಜೂರು ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಅಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಶಿವಮೊಗ್ಗ ಜಿಲ್ಲೆಯ ವಿವರಗಳನ್ನು ಕೊಡುತ್ತಿದ್ದಾರೆ. ಎಲ್ಲಿ ಅವಶ್ಯಕವಾಗಿ ವ್ಯವಸಾಯಕ್ಕೆ ಜಮೀನು ಬೇಕಾಗುತ್ತದೆಯೋ ಅಂಥಾ ಕಡೆ ಬಡವರಿಗೆ ಮತ್ತು ವ್ಯವಸಾಯಗಾರರಿಗೆ ಜಮೀನನ್ನು ಕೊಡಲಾಗುತ್ತಿದೆ.

ಶ್ರೀ ಬಿ. ಎಂ. ಇಮಿನಬ್ಬ.—ಸರ್ಕಾರದವರು ಕಾಡನ್ನು ಬೆಳೆಸುವುದಕ್ಕೆ ಆಸಕ್ತಿಯನ್ನು ವಹಿಸಿದ ಹಾಗೆ ಕಾಡನ್ನು ನಾಶ ಮಾಡತಕ್ಕಂಥ ಕಾಳಸಂತೆಕೋರರನ್ನು ಶಿಕ್ಷಿಸುವುದಕ್ಕೆ ಸರ್ಕಾರ ದವರು ಒಂದು ವಿಶೇಷವಾದ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ಎಲ್ಲೆಲ್ಲಿ ಕೆಲವು ದುಷ್ಟ ಶಕ್ತಿಗಳು ಕಾಡನ್ನು ನಾಶ ಮಾಡುವುದಕ್ಕೆ ಪ್ರಯತ್ನ ಮಾಡುತಿದ್ದಾರೆಯೋ ಅಂಥಾ ಕಡೆ ಸ್ಕ್ವಾಡುಗಳಿಂದ ಆ ದುಷ್ಟ ಶಕ್ತಿಗಳನ್ನು ಹಿಡಿದು ಶಿಕ್ಷೆ ಮಾಡತಕ್ಕ ಅವಕಾಶ ಇದೆ. ಆದ್ದರಿಂದ ಆ ಬಗ್ಗೆ ಎಲ್ಲಿಂದ ನೇರವಾಗಿ ಸರ್ಕಾರಕ್ಕೆ ವರದಿ ಬರುತ್ತದೆಯೋ ಅಂಥಾದ್ದನ್ನು ಇನ್‌ವೆಸ್ಟಿಗೇಷನ್ ಮಾಡಿ ತಕ್ಕ ಬಂದೋಬಸ್ತು ಮಾಡುತ್ತೇವೆ.